# ಕನ್ನಡ ನುಡಿ

■ ಚಂದ್ರಗೌಡ ಕುಲಕರ್ಣಿ

ಕನ್ನಡ ಮೊದಲು ಮೊಳಕೆಯೊಡೆಯಿತು
ಹಲ್ಮಿಡಿ ಶಾಸನದೆದೆಯಲ್ಲಿ!
ಬಾದಾಮಿ ಬಂಡೆಯ ಹಣೆಸಿಂಗರಿಸಿತು
ಅಕ್ಷರಮೇರು ಕೃಪೆಯಲ್ಲಿ!

ಪದವರಿತವರು ಓದದೆ ಬರೆದರು
ವಿಜಯನ ಕಾವ್ಯ ಮಾರ್ಗದಲಿ!
ಕೋಗಿಲೆ ದುಂಬಿಯ ಹಿಂಡು ಹಾಡಿತು
ಪಂಪನ ಬನವಾಸಿ ನಾಡಿನಲಿ!

ಆಡಿದ ಮಾತೇ ನುಡಿಮುತ್ತಾಯಿತು
ಮಾಶಿವಶರಣರ ವಚನದಲಿ!
ತಾಳತಂಬೂರಿಯ ಸ್ವರದಲಿ ಬೆರೆಯಿತು
ದಾಸವರೇಣ್ಯರ ಹಾಡಿನಲಿ!

ಜನಮನ ಭಾವವ ತಿದ್ದಿ ತೀಡಿತು
ಗುರು ಸರ್ವಜ್ಞನ ತ್ರಿಪದಿಯಲಿ!
ದೇಸಿ ಸತ್ವದ ಕೆನೆಮೊಸರುಣಿಸಿತು
ತತ್ವಾನುಭಾವದ ಪದಗಳಲಿ!

ಸಾಧನಕೇರಿಗೆ ಸಗ್ಗವ ತಂದಿತು
ನಾಕು ತಂತಿಯ ಮಿಡಿತದಲಿ!
ರಾಮಾಯಣದ ದರುಶನ ನೀಡಿತು
ರಸ ಋಷಿ ನಿಜದ ತುಡಿತದಲಿ!

ಕಡಲ ತರಂಗದ ಸೀಮೆಯ ದಾಟಿತು
ಭಾರ್ಗವ ಕೃತಿಗಳ ಹೊಳಪಿನಲಿ!
ಅದ್ಭುತ ಲೋಕದ ಗೂಡು ಒಡೆಯಿತು
ಪೂರ್ಣ ಚಂದ್ರನ ಬೆಳಕಿನಲಿ!



ಮಂಜುನಾಥ ಹುಲಕೊಪ್ಪದ

# ಬುದ್ಧಿವಂತ ಮೀನು

■ ವಿ. ವಿಜಯೇಂದ್ರ ರಾವ್



ಮಂಜುನಾಥ ಹುಲಕೊಪ್ಪದ

ಕಡಲ ಕಿನಾರೆಯ ಒಂದು ಪುಟ್ಟ ಗ್ರಾಮದಲ್ಲಿ ಉಮೇಶ್, ರಮೇಶ್ ಎಂಬ ಇಬ್ಬರು ಅಣ್ಣ ತಮ್ಮಂದಿರು ಇದ್ದರು. ಶಾಲೆಯ ನಂತರ ಅಪ್ಪನಿಗೆ ನೆರವಾಗಲು ಸಂಜೆಯ ಸಮಯದಲ್ಲಿ ಮೀನು ಮಾರಲು ಮಾರ್ಕೆಟ್ ಗೆ ಹೋಗುತ್ತಿದ್ದರು. ಯಾಕೋ ವ್ಯಾಪಾರ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ, ಇದಕ್ಕೆ ಏನಾದರೂ ಉಪಾಯ ಮಾಡಬೇಕೆಂದು ಯೋಚಿಸಿ ಚುರುಕು ಬುದ್ಧಿಯುಳ್ಳ ರಮೇಶ್, ಉಮೇಶ್‌ಗೆ ಹೇಳಿ, ನೀನು ನನಗಿಂತ ಸ್ವಲ್ಪ ದೂರ ನಿಂತು ಮಾರು ಅಂತ ಹೇಳಿದನು. ಉಮೇಶ್ ಒಂದು ಕೆಜಿ ಮೀನಿಗೆ ನೂರು ಎಂದರೆ, ರಮೇಶ್ ಒಂದು ಕೆಜಿ ಮೀನಿಗೆ ಐನೂರು ರೂಪಾಯಿ ಎಂದು ಹೇಳುತ್ತಿದ್ದ.

ಮೀನು ಖರೀದಿ ಮಾಡಲು ಪಕ್ಕದ ಊರಿನ ಪಟೇಲರು ಬಂದಾಗ, ಇವರಿಬ್ಬರ ಮೀನನ್ನು ನೋಡಿ, ಕೊನೆಗೆ ರಮೇಶನ ಹತ್ತಿರ ಹೋಗಿ ಏನಪ್ಪಾ ಹುಡುಗಾ, ನಿಮ್ಮಿಬ್ಬರ ಮೀನು ಒಂದೇ ತರಾ ಇದೆ, ಒಂದೇ ಜಾತಿಯದು ಅನ್ನುತ್ತೆ, ಆದರೆ ನೀನು ಐನೂರು ಅಂತಿದ್ದೀಯಾ, ಅವನು ನೂರು ಅಂತಾನೆ ಎಂದು ಆಶ್ಚರ್ಯದಿಂದ ಕೇಳಿದಾಗ, ರಮೇಶ್ ಪಟೇಲರೆ, ಇದು ಸಾಮಾನ್ಯ ಮೀನಲ್ಲ, ಬುದ್ಧಿವಂತ ಮೀನು. ಇದನ್ನು ತಿಂದವರ ಬುದ್ಧಿಯೂ ಚುರುಕಾಗುವುದು.ಬೇಕಿದ್ದರೆ ತೊಗೊಂಡು ನೀವೇ ಪರೀಕ್ಷಿಸಿ ನೋಡಿ ಎಂದು ಹೇಳಿದಾಗ, ಸರಿ ನೋಡೇಬಿಡೋಣವೆಂದು ಅದನ್ನು ಖರೀದಿಸಿ ಹೋದರು.

ಹೀಗೆ ಸತತವಾಗಿ ಒಂದು ವಾರ ತೊಗೊಂಡು ಆ ಮೀನನ್ನು ತಿಂದರೂ ಏನೂ ಬದಲಾವಣೆ ಅವರಿಗೆ ಕಾಣದಿದ್ದಾಗ, ಅವರಿಗೆ ತುಂಬಾ ಕೋಪ ಬಂದು, ಆ ಹುಡುಗನಿಗೆ ಸರಿಯಾಗಿ ತರಾಟೆಗೆ ತೊಗೋಬೇಕೆಂದು ಮತ್ತೆ ಮಾರ್ಕೆಟ್‌ಗೆ ಹೋದರು.

ಪಟೇಲರು ಬಂದದ್ದನ್ನು ನೋಡಿ ರಮೇಶ್, ಸಾರ್ ಬುದ್ಧಿವಂತ ಮೀನು ಬೇಕಾ? ನಿಮಗಾಗಿ ಬೇರೆ ತೆಗೆದು ಇಟ್ಟಿದ್ದೇನೆ ಎಂದಾಗ, ಕೋಪ ತಡೆಯಲಾರದೆ ಏ ಹುಡುಗಾ, ನನ್ನನ್ನೇನು ಮುಠ್ಠಾಳ ಅಂದುಕೊಂಡಿದ್ದೀಯಾ? ನನಗೇನೂ ಗೊತ್ತಾಗಲ್ವ? ಮೀನಿನಲ್ಲಿ ಬುದ್ಧಿವಂತ ಮೀನು ಅಂತ ಇರಲು ಸಾಧ್ಯವೇ? ಯಾಕೆ ನಂಗೆ ಮೋಸ ಮಾಡಿದೆ ? ನಿನ್ನನ್ನು ಈಗಲೇ ಪೊಲೀಸ್ ಸ್ಟೇಷನ್‌ಗೆ ಕರ್ಕೊಂಡು ಹೋಗ್ತೀನಿ ಎಂದು ಹೇಳಿದಾಗ, ರಮೇಶ್ ಸಾರ್, ನಿಲ್ಲಿ ನಿಲ್ಲಿ, ಒಂದು ವಾರದ ಮುಂಚೆ ನಿಮಗೆ ಇದನ್ನೇ ಕೇಳಬಹುದೆಂದು ಅನ್ನಿಸಲೇ ಇಲ್ಲ, ಆದರೆ ಒಂದು ವಾರ ನಮ್ಮ ಈ ಮೀನನ್ನು ತಿಂದು ನಿಮ್ಮ ಬುದ್ಧಿ ಚುರುಕಾಗಿ ಇದನ್ನು ಕೇಳುತ್ತಿದ್ದೀರಾ. ಆದ್ದರಿಂದ, ನಾನೇನು ನಿಮಗೆ ತಪ್ಪು ಹೇಳಿದೆ? ನಿಮಗೆ ಪ್ರಶ್ನೆಗಳನ್ನು ಕೇಳುವಂತೆ ಮಾಡಿದ್ದಕ್ಕಾಗಿ ನನಗೆ ಹೊಗಳದೆ ಬೈಯ್ಯುತ್ತಿದ್ದೀರಲ್ಲಾ? ಎಂದು ಮರು ಪ್ರಶ್ನಿಸಿದಾಗ ಪಟೇಲರಿಗೆ, ಅಯ್ಯೋ ಹೌದಲ್ವೇ ಅಂತ ಅನುಮಾನ ಬಂದು ಅವರು ತೆಪ್ಪಗೆ ವಾಪಸು ಹೋದದ್ದನ್ನು ಕಂಡು ಮುಸಿ ಮುಸಿ ನಕ್ಕರು ರಮೇಶ ಮತ್ತು ಉಮೇಶ..! ■